**ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಕೊರಟಗೆರೆ**

**ಸಿ.ಸಿ. ನಂ. 379/2019**

| | | |
|---|---|---|
| ಹೆಸರು | : ನದಾಫ್ | ಪಿಡಬ್ಲ್ಯೂ-1 |
| ತಂದೆಯ ಹೆಸರು | : ಖಾದರ್ ಸಾಬ್ | ಸಿಡಬ್ಲ್ಯೂ-18 |
| ವಯಸ್ಸು | : 53 ವರ್ಷ | |
| ವೃತ್ತಿ | : ಸಿಪಿಐ ತಿಲಕ್ ಪಾರ್ಕ್ ಠಾಣೆ | |
| ವಾಸ ಸ್ಥಳ | : ತುಮಕೂರು | |

**ದಿಃ 20.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ. ಸ. ಅಭಿಯೋಜಕರಿಂದ:**

ನಾನು 2019 ರಿಂದ 2021 ರವರೆಗೆ ಕೊರಟಗೆರೆ ವೃತ್ತದಲ್ಲಿ ಸಿಪಿಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 22.04.2019 ರಂದು ಈ ಪ್ರಕರಣದ ಕಡತವನ್ನು ಚಾಸಾ-17 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದುವರಿಸಿ ಕೊರಟಗೆರೆ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಮೃತ ಲಕ್ಷ್ಮೀನರಸಯ್ಯರವರ ಶವ ತನಿಖೆಯನ್ನು ಚಾಸಾ-4 ಮತ್ತು 5 ರವರ ಸಮಕ್ಷಮ ಕೈಗೊಂಡಿರುತ್ತೇನೆ. ಅದೇ ದಿನ ಚಾಸಾ-8 ರಿಂದ 10 ರವರ ಹೇಳಿಕೆಗಳನ್ನು ದಾಖಲು ಮಾಡಿಕೊಂಡಿರುತ್ತೇನೆ. ಅದೇ ದಿನ ಮೃತ ಲಕ್ಷ್ಮೀನರಸಯ್ಯರವರ ಮರಣೋತ್ತರ ಪರೀಕ್ಷೆ ಆದ ನಂತರ ಶವವನ್ನು ಅವರ ಸಂಬಂಧಿಕರ ವಶಕ್ಕೆ ನೀಡಿರುತ್ತೇನೆ. ನಂತರ ಅದೇ ದಿನ ಅಪಘಾತ ಸ್ಥಳಕ್ಕೆ ಭೇಟಿ ನೀಡಿ ಚಾಸಾ-10 ಮತ್ತು 11 ರವರ ಸಮಕ್ಷಮ ಚಾಸಾ-2 ರವರು ಸ್ಥಳವನ್ನು ತೋರಿಸಿದ ಮೇರೆಗೆ ಸಂಜೆ 5 ರಿಂದ 6 ಗಂಟೆ ವರಗೊ ಸ್ಥಳದಲ್ಲಿ ಪಂಚನಾಮೆ ಕ್ರಮ ಜರುಗಿಸಿ ಅಪಘಾತದಲ್ಲಿ ಭಾಗಿ ಆಗಿದ್ದ KA 06-EG-535 ದ್ವಿಚಕ್ರವಾಹನವನ್ನು ಮುಂದಿನಕ್ರಮಕ್ಕಾಗಿ ಅಮಾನತ್ತುಪಡಿಸಿಕೊಂಡಿರುತ್ತೇನೆ, ಸ್ಥಳದಲಿಸ್ಲಿ ಅಪಘಾತ ಸ್ಥಳದ ನಕಾಶೆಯನ್ನು ತಯಾರಿಸಿರುತ್ತೇನೆ. ನಂತರ ಠಾಣೆಗೆ ವಾಪಸ್ ಆಗಿ ಅಪಘಾತದಲ್ಲಿ ಭಾಗಿ ಆಗಿದ್ದ ದ್ವಿಚಕ್ರ ವಾಹನವನ್ನು ತಪಾಸಣೆ ಮಾಡಿ ವರದಿ ನೀಡುವಂತೆ ಚಾಸಾ-15 ರವರಿಗೆ ಮನವಿಯನ್ನು ನೀಡಿರುತ್ತೇನೆ.

2. ದಿಃ 24.04.2019 ರಂದು ಚಾಸಾ-2 ಮತ್ತು 3 ರವರ ಹೇಳಿಕೆಗಳನ್ನು ದಾಖಲು

ಮಾಡಿಕೊಂಡಿರುತ್ತೇನೆ. ದಿಃ 30.04.2019 ರಂದು ದ್ವಿಚಕ್ರ ವಾಹನ ಸಂಃ KA 06-EG-535 ರ ಮಾಲೀಕರಾದ ಆರೋಪಿಗೆ ಕಲಂ 133 ಮೋಟರ್ ವಾಹನ ಕಾಯ್ದೆ ಅಡಿ ನೋಟೀಸನ್ನು ಜಾರಿ ಮಾಡಿರುತ್ತೇನೆ. ಅದೇ ದಿನ ಅವರ ಉತ್ತರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿ ಆರೋಪಿಯಿಂದ ನಷ್ಟ ಭರ್ತಿ ಪತ್ರವನ್ನು ಪಡೆದು ದ್ವಿಚಕ್ರವಾಹನವನ್ನು ಅವರ ವಶಕ್ಕೆ ನೀಡಿರುತ್ತೇನೆ. ಅದೇ ದಿನ ಮೃತ ಲಕ್ಷ್ಮೀನರಸಯ್ಯರವರ ಪಿ ಎಂ ವರದಿಯನ್ನು ತುಮಕೂರು ಜಿಲ್ಲಾ ಆಸ್ಪತ್ರೆಯಿಂದ ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 10.05.2019 ರಂದು ಕೊರಟಗೆರೆಯ ಸರ್ಕಾರಿ ಆಸ್ಪತ್ರೆಯಿಂದ ಆರೋಪಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ. ದಿಃ 17.05.2019 ರಂದು ಚಾಸಾ-15 ರವರಿಂದ ವರದಿಯನ್ನು ಪಡೆದುಕೊಂಡು ಕಡತದಲ್ಲಿ ಅಳವಡಿಸಿಕೊಂಡಿರುತ್ತೇನೆ. ನನ್ನ ತನಿಖೆಯಲ್ಲಿ ಆರೋಪಿ ವಿರುದ್ಧ ಆರೋಪ ಸಾಬೀತಾದ ಕಾರಣ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

3. ಸಾಕ್ಷಿಯು ಕಡತದಲ್ಲಿರುವ ಶವತನಿಖಾ ವರದಿ, ಸ್ಥಳ ಪಂಚನಾಮೆ, ಕಚ್ಚಾ ನಕ್ಷೆ, ಗಾಯದ ಪ್ರಮಾಣ ಪತ್ರ, IMV ವರದಿ, ಪಿ ಎಂ ವರದಿ , ಕಲಂ 133 ರಡಿಯಲ್ಲಿ ನೀಡಿದ ನೋಟೀಸ್, ಕಲಂ 133 ಕ್ಕೆನೀಡಿದ ಉತ್ತರ, ನಷ್ಟ ಭರ್ತಿ ಪ್ರಮಾಣ ಪತ್ರ ಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-1 ರಿಂದ 9 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಯಿಂದ ನಿಪಿ-9(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಆರೋಪಿ ಪರ ವಕೀಲರು ಸದರಿ ಭಾವಚಿತ್ರಗಳಿಗೆ ಸಿ ಡಿ ಇಲ್ಲದ ಕಾರಣ ನಿಶಾನೆಗಳಾಗಿ ಗುರುತಿಸಲು ಆಗುವುದಿಲ್ಲ ಎಂದು ಆಕ್ಷೇಪಣೆ ವ್ಯಕ್ತ ಪಡಿಸಿದ್ದು, ಆರೋಪಿ ಪರ ವಕೀಲರ ಆಕ್ಷೇಪಣೆಗೆ ಒಳಪಟ್ಟು ಸದರಿ ಭಾವಚಿತ್ರಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು. ಆರೋಪಿ ನ್ಯಾಯಾಲಯದ ಮುಂದಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ ಹೆಚ್ ಎನ್ ವಕೀಲರಿಂದ:**

ನಾನು ಸ್ಥಕ್ಕೆ ಭೇಟಿ ನೀಡಿರಲಿಲ್ಲ, ಚಾಸಾ-2, 10 ಮತ್ತು 11 ರವರು ಸ್ಥಳದಲ್ಲಿರಲಿಲ್ಲ, ಚಾಸಾ-2 ರವರು ಯಾವುದೇ ಸ್ಥಳವನ್ನು ತೋರಿಸಿರುವುದಿಲ್ಲ, ನಾನು ಸ್ಥಳದಲ್ಲಿ ಯಾವುದೇ ಮಹಜರ್ ಕ್ರಮವನ್ನು ಜರುಗಿಸಿಲ್ಲ, ಕಚ್ಚಾ ನಕ್ಷೆಯನ್ನು ತಯಾರಿಸಿರುವುದಿಲ್ಲ, ಯಾವುದೇ ದ್ವಿಚಕ್ರ ವಾಹನವನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ, ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ, ಆರೋಪಿಗೆ ಕಲಂ 133 ರಡಿಯಲ್ಲಿ ಯಾವುದೇ ನೋಟೀಸ್

ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತನಿಖೆಯಲ್ಲಿ ಆರೋಪಿ ವಿರುದ್ಧ ಯಾವುದೇ ಆರೋಪ ಸಾಬೀತಾಗದೇ ಇದ್ದರೂ ಮೃತ ಲಕ್ಷ್ಮೀನರಸಯ್ಯರವರ ಕುಟುಂಬಕ್ಕೆ ಸಹಾಯ ಮಾಡುವ ಸಲುವಾಗಿ ಆರೋಪಿ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು. )

**ಓ.ಹೇ.ಕೇ.ಸರಿ ಇದೆ.**

**ಸಿ.ಜೆ.ಮತ್ತು ಪ್ರ.ದ.ನ್ಯಾ.ದಂ**
**ಕೊರಟಗೆರೆ**